| Publication: | Kannada Prabha | Edition: | Bangalore |
|---|---|---|---|
| Published Date: | 06 Aug 2015 | Page No.: | 3 |
| | | Display: | 1/1 |



ಟಿಸಿಎಸ್ ಐಟಿ ವಿಜ್ ಸ್ಪರ್ಧೆಯಲ್ಲಿ ವಿಜೇತರಾದ ಇಂದಿರಾನಗರದ ನ್ಯಾಷನಲ್ ಪಬ್ಲಿಕ್ ಶಾಲೆಯ ಶ್ಯಾಮ್‌ಗೋಪಾಲ್ ಕಾರ್ತಿಕ್ ಹಾಗೂ ಅಖಿಲ್ ಸಿದ್ದಾರ್ಥ್ ಅವರಿಗೆ ನಗರ ಪೊಲೀಸ್ ಹೆಚ್ಚುವರಿ ಆಯುಕ್ತ ಪ್ರತಾಪ್ ರೆಡ್ಡಿ ಹಾಗೂ ಟಿಸಿಎಸ್ ಉಪಾಧ್ಯಕ್ಷ ನಾಗರಾಜ್ ಬಹುಮಾನ ವಿತರಿಸಿದರು.

# ಐಟಿ ವಿಜ್: ಕಾರ್ತಿಕ್, ಅಖಿಲ್ ವಿಜೇತರು

**ಬೆಂಗಳೂರು:** ಟಿಸಿಎಸ್ ಆಯೋಜಿಸಿದ್ದ ಆಂತರಿಕ ಶಾಲಾ ಮಟ್ಟದ ರಸಪ್ರಶ್ನೆ ಸ್ಪರ್ಧೆ 'ಐಟಿ ವಿಜ್ -2015'ರಲ್ಲಿ ಇಂದಿರಾನಗರದ ನ್ಯಾಷನಲ್ ಪಬ್ಲಿಕ್ ಶಾಲೆಯ ಶ್ಯಾಮ್‌ಗೋಪಾಲ್ ಕಾರ್ತಿಕ್ ಹಾಗೂ ಅಖಿಲ್ ಸಿದ್ದಾರ್ಥ್ ವಿಜೇತರಾಗಿದ್ದಾರೆ.

ಚೌಡಯ್ಯ ಸ್ಮಾರಕ ಭವನದಲ್ಲಿ ಬುಧವಾರ ಅಂತಿಮ ಹಂತದ ಸ್ಪರ್ಧೆ ನಡೆಯಿತು. ಈ ತಂಡಕ್ಕೆ ತೀವ್ರ ಪೈಪೋಟಿ ನೀಡಿದ ಕೋರಮಂಗಲ ನ್ಯಾಷನಲ್ ಪಬ್ಲಿಕ್ ಶಾಲೆಯ ಅಂಕಿತ್ ಸಿವ ಹಾಗೂ ವಿಕ್ರಂ ಶೇಖರ್ ದ್ವಿತೀಯ ಸ್ಥಾನ ಪಡೆದರು. ವಿಜೇತ ತಂಡಗಳಿಗೆ ನಗರ ಪೊಲೀಸ್ ಹೆಚ್ಚುವರಿ ಆಯುಕ್ತ ಪ್ರತಾಪ್ ರೆಡ್ಡಿ ಹಾಗೂ ಟಿಸಿಎಸ್ ಉಪಾಧ್ಯಕ್ಷ ನಾಗರಾಜ್ ಬಹುಮಾನ ವಿತರಿಸಿದರು. ವಿಜೇತರಿಗೆ ಹಾಗೂ ಅಂತಿಮ ಹಂತದ ಸ್ಪರ್ಧಾಳುಗಳಿಗೆ ಐಪ್ಯಾಡ್ ಏರ್, ಐಪ್ಯಾಡ್ ಮಿನಿ, ಲ್ಯಾಪ್‌ಟಾಪ್ ಬ್ಯಾಗ್, ಬ್ಲ್ಯೂಟೂತ್‌ನೊಂದಿಗೆ ಸೆಲ್ಫಿಸ್ಟಿಕ್ ಬಹುಮಾನವಾಗಿ ನೀಡಲಾಯಿತು.

ಕ್ಲೌಡ್ ಕಂಪ್ಯೂಟಿಂಗ್, ಇಂಟರ್‌ನೆಟ್, ಟೆಲಿಕಾಂ, ಬಯೋಮೆಟ್ರಿಕ್ಸ್, ರೊಬೊಟಿಕ್ಸ್ ವಲಯ, ಅಂತರ್ಜಾಲ ಹಾಗೂ ವಿಭಿನ್ನ ತಾಣಗಳು, ಐಟಿಯಿಂದ ಶಿಕ್ಷಣ, ಮನರಂಜನೆ, ಪುಸ್ತಕ, ಮಲ್ಟಿಮೀಡಿಯಾ, ಸಂಗೀತ, ಸಿನಿಮಾ, ಬ್ಯಾಂಕಿಂಗ್, ಜಾಹೀರಾತು, ಕ್ರೀಡೆ ಸೇರಿದಂತೆ ಐಟಿ ವಿಭಾಗಕ್ಕೆ ಸಂಬಂಧಿಸಿದ ಪ್ರಶ್ನೆಗಳಿದ್ದವು. ಅಂತಿಮ ಸ್ಪರ್ಧೆಗೆ ಆಯ್ಕೆಯಾದ ಎಲ್ಲರಿಗೂ ಟ್ವಿಟರ್ ಸ್ಪರ್ಧೆ ಏರ್ಪಡಿಸಲಾಗಿತ್ತು. ಪ್ರತಿ ನಗರದಲ್ಲಿ ಸ್ಪರ್ಧೆಯ ದಿನ ಹೆಚ್ಚಿನ ಟ್ವೀಟ್ ಮಾಡಿದ ಇಬ್ಬರು ವಿಜೇತರಿಗೆ ಬಹುಮಾನ ನೀಡಿ ಗೌರವಿಸಲಾಯಿತು. ಕೆಪಿಎನ್‌ಎಸ್